Doc-128
1-82

Regd No BG 165 8-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ನಾಗಪ್ಪ ಆಳ್ವಾರವರ ಸ್ತುತ್ಯ ಸಲಹೆ

ಸುಗ್ರೀವಾಜ್ಞೆ

ಕೇರಳ ವಿಶ್ವವಿದ್ಯಾನಿಲಯದ ಈಗಿನ ಸಿಂಡಿಕೇಟ್ ಮತ್ತು ಸೆನೇಟ್ ವಿಸರ್ಜಿಸಿ ಮಾಡಿ, ಹೊಸದಾಗಿ ನೇಮಿಸುವ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ಘೋಷಿಸಿರುವರು.

★

ಅನಾವರಣ

ವಾರ್ಧಾದಿಂದ ಬಂದಿರುವ ವಾರ್ತೆಯ ಪ್ರಕಾರ ಗಾಂಧೀಜಿಯವರ ಜೀವಂತ ಆಕೃತಿಯ ಕಂಚಿನ ಪ್ರತಿಮೆಯನ್ನು ಸೇವಾಗ್ರಾಮದ ರಸ್ತೆಯಲ್ಲಿ, ಜಿಲ್ಲಾ ನ್ಯಾಯಾಲಯದ ಬಳಿ ಖಾನ್ ಅಬ್ದುಲ್ ಗಫಾರ್ ಖಾನರು ಅನಾವರಣ ಮಾಡಿದರು.

○

ನೀರವ ಕಡಿಮೆ

ಏಷ್ ಇಂಡಿಯ ಕಸ್ಟೊರ್ಟಿಯಂ ವಾಗ್ದಾನ ಮಾಡಿದ್ದ ನೆರವಿನಲ್ಲಿ ಪ್ರಾಜೆಕ್ಟ್ ಯೇತರದಲ್ಲಿ 25 ಮಿಲಿಯ ಡಾಲರೂ, ಪ್ರಾಜೆಕ್ಟ್‌ಗಳಲ್ಲಿ 200ಮಿಲಿಯ ಡಾಲರು ಡಾಲರೂ ಕಡಿಮೆ ಆಗುವ ಸಂಭವವಿದೆ

●

ಶಿವಪ್ಪನವರ ಕರೆ

ಸರ್ಕಾರಿ ಆಡಳಿತದಲ್ಲಿನ ಭದ್ರಾವತಿ ಕಬ್ಬಣ ಉಕ್ಕಿನ ಕಾರ್ಖಾನೆಗೆ ಸ್ಕ್ರೆಪ್ ಉಕ್ಕಿನ ಸರಬರಾಜಿನಲ್ಲಿ ಭಾರಿ ಹಣ ನಷ್ಟವಾಗಿರುವುದೆಂದು ಹೇಳಲಾಗಿರುವ ಬಗ್ಗೆ ಪೂರ್ಣ ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ವಿರೋಧ ಪಕ್ಷದ ನಾಯಕ ಶ್ರೀ ಶಿವಪ್ಪನವರು ಬೆಂಗಳೂರಿನಲ್ಲಿ ತಿಳಿಸಿರುವರು

○ ಮಂತ್ರಿಮಂಡಲ ರಚಿಸಲು ತಮ್ಮ ಪಕ್ಷವನ್ನು ಆಹ್ವಾನಿಸುವಂತೆ ಬಿಹಾರು ಕಾಂಗ್ರೆಸ್ ಶಾಸನ ಸಭೆ ಪಕ್ಷದ ನಾಯಕ ಶ್ರೀ ಹರಿಹರಸಿಂಗ್ ರಾಜ್ಯಪಾಲ ಶ್ರೀ ಕನುಂಗೋರವರಿಗೆ ಸೂಚಿಸಿರುವರೆಂದು ವಾರ್ತೆ

ದೀಪಾವಳಿ ಶುಭಾಶಯಗಳು

ಭಗವಂತನು ಸಮಸ್ತರಿಗೂ ಸನ್ಮಂಗಳವುಂಟು ಮಾಡಲಿ

— ಸತ್ಯವಾದಿ

ಸಂಪತ್ತು ತೆರಿಗೆ

ಮದರಾಸು ರಾಜ್ಯದಲ್ಲಿ ಈ ವರ್ಷ ಸೆಪ್ಟೆಂಬರ್ ವರೆಗೆ (6 ತಿಂಗಳು) ವರಗೆ 1 ಲಕ್ಷ ಮಂದಿ ಸಂಪತ್ತು ತೆರಿಗೆ ಕೊಡುವವರಿದ್ದರೆಂದು ರೂ 6 ಕೋಟಿ ತೆರಿಗೆ ಉತ್ಪತ್ತಿ ಆಯಿತೆಂದೂ ನೇರ ತೆರಿಗೆಗಳ ಕೇಂದ್ರ ಸಮಿತಿ ಅಧ್ಯಕ್ಷ ಶ್ರೀ ಮುತ್ತೂ ಹೇಳಿದರು.

★

ಆಹಾರ ನಾಶ ನಿಲ್ಲಲಿ

ಈಗ ವಿಶ್ವದ ಆಹಾರದಲ್ಲಿ ವಾರ್ಷಿಕ ನಾಶವಿದ ಹಾಳಾಗುತ್ತಿರುವುದರಲ್ಲಿ ಕಡೇ ಪಕ್ಷ ಶೇಕಡ 10 ಕಡಮೆ ಆದರೂ ಎಲ್ಲರಿಗೂ ಬಿಗುವಷ್ಟು ಆಹಾರ ಮತ್ತು ಫ್ರೊಟೀನ್ ಇರುವುದೆಂದು ಆಹಾರ ನಿಪುಣ ಡಾ|| ಎ ಮುಂಡ್ ಹಾರ್ಟ್‌ಮನ್ಸ್ ರೋಮನಲ್ಲಿ ತಿಳಿಸಿದರು

★

ಭೂಮಿ ಹಂಚಿಕೆ ವ್ಯವಸ್ಥೆ

ಬಡಬಗ್ಗರಿಗೆ ಭೂಮಿ ಹಂಚಿಕೆಯು ಶೀಘ್ರವಾಗಿ ನಡೆಯಲು ಆಂಧ್ರ ರಾಜ್ಯ ಸರಕಾರ 623 ರೆವಿನ್ಯೂ ಇನ್ಸ್‌ಪೆಕ್ಟರ್‌ರನ್ನು ನೇಮಿಸಿದೆ

★

ಮಕ್ಕಳ ದಿನೋತ್ಸವ

ಮೈಸೂರು— ಹಿಂದಿನ ವರ್ಷಗಳಂತೆ ಈ ವರ್ಷವೂ ತಾ|| 14 ರಂದು ಮಕ್ಕಳ ದಿನದ ಉತ್ಸವವು ಪೌರಸಭಾ ಆಶ್ರಯದಲ್ಲಿ ನಡೆಯಲಾಗುವುದು.

ಮಾತುಕತೆ ಬಿದ್ದು ಹೋಯಿತು

ನವದೆಹಲಿ— ಪ್ರಧಾನಿಯವರ ನಿನ್ನೆ ಮಧ್ಯಾಹ್ನ ಊಟಕಾಲದಲ್ಲಿ ಪ್ರಧಾನಿ ಇಂದಿರಾರವರಿಗೂ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರಿಗೂ ಬಿಕ್ಕಟ್ಟು ಪರಿಹಾರದ ಬಗ್ಗೆ ಮಾತುಕತೆ ವಿಫಲವಾಯಿತು – ಪ್ರಮುಖ ವಿಷಯದಲ್ಲಿ ಉಭಯತ್ರರೂ ಒಬ್ಬರು ಹೇಳಿದ್ದಕ್ಕೆ ಮತ್ತೊಬ್ಬರು ಒಪ್ಪಲಿಲ್ಲ

★

ಅವಿಶ್ವಾಸ

ಭುವನೇಶ್ವರ— ಎಸ್ಸೆಸ್ಪಿ ಲೋಕಸಭೆಯಲ್ಲಿ ಇಂದಿರಾ ಗಾಂಧಿ ಸರಕಾರದ ನೇರ ಅವಿಶ್ವಾಸ ಸೂಚನೆ ತರಲಿದೆ – ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಬದಲಾಯಿಸಲು ಎಲ್ಲ ವಿರೋಧ ಪಕ್ಷಗಳ ಜೆಂಬಲಾಗುವುದಂತೆ.

ಸ್ತುತ್ಯ ಸಲಹೆ

ಬೆಂಗಳೂರು— ಸಂಸ್ಥೆಯ ಏಕೀಕೃತ ನಾಯಕತ್ವಕ್ಕೆ ಸ್ಥಳ ಕೊಡಲು ಪ್ರಧಾನಿಯವರೂ ಕಾಂಗ್ರೆಸ್ ಅಧ್ಯಕ್ಷರೂ ತಮ್ಮ ಪದವಿಗಳಿಂದ ಕೆಳಗಿಳಿಯಬೇಕು, ಎಂದು ಎಂ ಪಿ ಸಿ ಸಿ ಅಧ್ಯಕ್ಷ ಡಾ | ನಾಗಪ್ಪ ಆಳ್ವಾರವರು ಹೇಳಿದರು.

★

ಬಾಜಿಯಲ್ಲಿ ಗೆದ್ದು ಸತ್ತ

ಥೋನಾ (ಸಿಡ್ಜ್‌ಲೆಂಡ್)— ನಿಟ್ರೊ ಎಂಬಾತನು ನೀರನ್ನು ಜೆರಿಸದ 10 ಲೋಟ ಪಸ್ಟಿಸ್ ಮದ್ಯ ಕುಡಿತು, ಬಾಜಿಯಲ್ಲಿ ಗೆದ್ದು, ಕೆಳಗೆ ಬಿದ್ದು ಸತ್ತುಹೋದ ; ಈ ಮದ್ಯಕ್ಕೆ ಕಡೇಪಕ್ಷ 4 ರಷ್ಟು ನೀರು ಸೇರಿಸಿ ಕುಡಿಯಬೇಕು ; ಇವನಿಗೆ ಹೆಂಡತಿ ಮತ್ತು 5 ಮಕ್ಕಳಿದ್ದಾರೆ.

ದಸರಾ ವಸ್ತುಪ್ರದರ್ಶನದಲ್ಲಿ
ವಿಶೇಷ ಮನರಂಜನೆ ಕಾರ್ಯಕ್ರಮ
ತಾ|| 9-11-1969 ಭಾನುವಾರ
ಸಂಜೆ 7 ಘಂಟೆಗೆ
ಮದ್ರಾಸಿನ ಪ್ರಸಿದ್ಧ ಸಿನಿಮಾ ತಾರೆ ಶ್ರೀಮತಿ ಕಮಲ ಅವರಿಂದ
ನೃತ್ಯ ಪ್ರದರ್ಶನ
ಪ್ರವೇಶ ದರ 50. ಪೈಸೆ.

ನೀವು ಲಕ್ಷಾಧೀಶ್ವರರಾದರೂ ಆಗಬಹುದು
ಮೈಸೂರು ರಾಜ್ಯದ ಲಾಟರಿ
2,50 000 ರೂ. ಗಳ 4 ಮೊದಲನೆ ಬಹುಮಾನಗಳು
1 00,000 ರೂ. ಗಳ 4 ಎರಡನೆ ಬಹುಮಾನಗಳು
ಇವುಗಳಲ್ಲದೆ ಜೊತೆಗೆ 4,268 ಇತರ 100 ರೂ. ಇಂದ 50,000 ರೂ. ವರೆಗಿನ ನಗದು ಬಹುಮಾನಗಳು —
ಒಂದು ಟಿಕೆಟ್ಟಿನ ಬೆಲೆ 1-00 ರೂ. ಮಾತ್ರ
ಲಾಟರಿ " ಡ್ರಾ " ಮಾಡುವ ತಾರೀಖು, 25 ನೇ ಜನವರಿ 1970, ಭಾನುವಾರ
ಅಧಿಕೃತ ಮಾರಾಟಗಾರರು :
ಬಾಹುಸ್ಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಬಹು ಪತಿತ್ವ ಜನಾಂಗ

ನೀಲಗಿರಿಯಲ್ಲಿ ವಾಸಿಸುತ್ತಿರುವ ತೊಡವರು ಪಾಂಡವರ ನೇರ ವಂಶಜರೆಂದು ಹೇಳಿಕೊಳ್ಳುತ್ತಾರೆ. ಈ ಜನರಲ್ಲಿ ಬಹುಪತಿತ್ವ ಪದ್ಧತಿಯಿದೆ. ಒಂದು ಮನೆಯಲ್ಲಿ ಒಬ್ಬಾತನು ವಿವಾಹವಾದರೆ ಆ ಮಹಿಳೆಯನ್ನು ಆತನ ಸಹೋದರರೂ ಅನುಭವಿಸಬಹುದು. ಹೆಣ್ಣು ಹುಟ್ಟಿದೊಡನೆ ಗಂಡು ಹುಡುಕಿ ಮದುವೆ ಮಾಡುತ್ತಾರೆ. ಆ ಹುಡುಗಿ ದೊಡ್ಡವಳಾದ ಮೇಲೆ ಅವಳ ಗಂಡನ ಮನೆಗೆ ಹೋಗುತ್ತಾಳೆ. ಆಗಲೂ ಒತ್ತು ಇನ್ನಳು ಹೊಂದಳು ದೇವಾಲಯದ ಮುಂದೆ ದೈವ ಕಲ್ಲನ್ನು ಹೊತ್ತು ತರಬೇಕು. ಮಹಾಭಾರತದ 5 ಸಹೋದರರಂತೆ ಒಬ್ಬ ಮಹಿಳೆಯೊಡನೆ ಎಲ್ಲ ಸಹೋದರರೂ ವಾಸಿಸಬಹುದೆಂದು ತೊಡವರ ಹಿರಿಯರೊಬ್ಬರು ಹೇಳಿದ್ದರು. ತೊಡವರಿಗೆ ಎಮ್ಮೆಯೇ ದೇವರು.

ಜರ್ಮನಿಯ ಸಹಾಯ

ಇಂಡಿಯಾದಲ್ಲಿ ಅತ್ಯುನ್ನತ ಪರ್ವತವಾದ ಹಿಮಾಲಯ ಪ್ರಾಂತದಲ್ಲಿ ಕೃಷಿ ಸಾಯೋಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಮಂಡಿ ಎಂಬಲ್ಲಿ ಜರ್ಮನಿ ಮತ್ತು ಇಂಡಿಯ ಜಂಟಿ ಯೋಜನೆಯೊಂದರಲ್ಲಿ ಬಾರ್ ಸರ್ಕಾರವು ಬೇಕಾದ ತಜ್ಞರ ಸಹಾಯವನ್ನು ನೀಡುತ್ತಿದೆ. 4 ಸಾವಿರ ಚಿಣ್ಣ ಸಣ್ಣ ಹಳ್ಳಿಗಳಿಂದ ಕೂಡಿದ 4 ಲಕ್ಷ ಜನ ಸಂಖ್ಯೆ ಇರುವ ಮಂಡಿ ಪ್ರದೇಶದಲ್ಲಿ ಜರ್ಮನಿಯಿಂದ ಬಂದಿರುವ ಸ್ವಯಂಸೇವಕ ತಜ್ಞರು ವ್ಯವಸಾಯಾಭಿವೃದ್ಧಿ ಕಾರ್ಯದಲ್ಲಿ ಅನೇಕ ಬಗೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಈಗಾಗಲೇ ಹನ್ನೆರಡು ಲಕ್ಷ ಡಾಲರ್ (2 ಲಕ್ಷ ಡಾಲರುಗಳು) ಗಳನ್ನು ವಿನಿಯೋಗಿಸಿ ಈ ಪ್ರಣಾಳಿಕೆ ಪ್ರಾರಂಭಿಸಿದ್ದಾರೆ. — ಯು.ಪಿ.ಎಸ್.

ಅಲಪ್ಪಿಯಲ್ಲಿ ವಿರುದ್ಧ ಪಕ್ಷಗಳ ವಿದ್ಯಾರ್ಥಿಗಳಲ್ಲಿ ಹೊಡೆದಾಟವಾಗಿ 13 ಜನ ಗಾಯಗೊಂಡು, 2 ಕಾಲೇಜುಗಳು ಬಂದಾದವು.

ವುಡ್‌ಲ್ಯಾಂಡ್ ಜಯಪ್ರದ 5ನೇ ವಾರ

ಶಿ ಅಮೋಘ ಸ್ಯಾಕಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್-ಕಲರ್ —

ಹಸೀನಾ ಮಾನ್ ಜಾಯೇಗಿ

ಶಶೀಕಪೂರ್ ಬಬೀತಾ ಜಾನೀದಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 3 ನೇ ವಾರ

.... ಅತ್ಯಮೋಘ ತಮಿಳು ಚಿತ್ರ ....

ತುಣ್ಬೆವನ

ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್

ನಿರ್ದೇಶನ : ಎಂ ಎಂ ತಿರುಮಂಗಂ

ದಿನ 3 ಆಟಗಳು

ದೇಶದ ಹಿತಕ್ಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಕಳಕಳಿಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟಿಸಿ ಲಾಭಪಡೆಯಿರಿ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ನೈಪೈಸೆ; ಅಂಚೆಯೆಜ್ಜೆ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2-

SHAKTI

SUDHA

A Superb Tonic

Help The Gorakshana

ಗೋರಕ್ಷಣೆ ಮತ್ತು ಪಾಲನೆಯಲ್ಲಿ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ಕೊಡಿ

protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore